# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

*(ಐಎಸ್‌ಓ ಪ್ರಮಾಣೀಕೃತ ಶಾಸನಬದ್ಧ ಸಹಕಾರಿ ಸಂಸ್ಥೆ)*

'ನಿರ್ಮಾಣ ಭವನ', ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

ದೂರವಾಣಿ: 080 23378375-80, ಇ-ಮೇಲ್: souharda@souharda.coop


ಸಂ:ಸಂಸ/ಸೂ/1/2016-17 ದಿನಾಂಕ:11.11.2016

**ಭಾರತೀಯ ರಿಸರ್ವ್ ಬ್ಯಾಂಕ್ ರೂ.500/- ಮತ್ತು ರೂ.1000/- ಮುಖಬೆಲೆಯ ನೋಟುಗಳ ಕುರಿತಂತೆ ದಿನಾಂಕ 08 ನವಂಬರ್ 2016ರಂದು ನೀಡಿರುವ ಸುತ್ತೋಲೆ ಸಂಖ್ಯೆ: DCM (Plg) No.1226/10.27.00/2016-17 ರ ಕುರಿತಂತೆ ಸೌಹಾರ್ದ ಸಹಕಾರಿಗಳಿಗೆ ಸೂಚನೆಗಳು**

**ಆತ್ಮೀಯ ಸಹಕಾರಿ ಬಂಧುಗಳೇ,**

ಭಾರತೀಯ ರಿಸರ್ವ್ ಬ್ಯಾಂಕ್ ರೂ.500/- ಮತ್ತು ರೂ.1000/- ಮುಖಬೆಲೆಯ ನೋಟುಗಳ ಕುರಿತಂತೆ ದಿನಾಂಕ 08 ನವಂಬರ್ 2016ರಂದು ಸುತ್ತೋಲೆ ಸಂಖ್ಯೆ: DCM (Plg) No.1226/10.27.00/2016-17 ನೀಡಿರುತ್ತದೆ. ಈ ಸುತ್ತೋಲೆಯನ್ವಯ ರಾಷ್ಟ್ರದ ಎಲ್ಲಾ ಬ್ಯಾಂಕುಗಳು ಮತ್ತು ಅಂಚೆ ಕಛೇರಿಗಳೂ ಸಹ ಪ್ರಸ್ತುತ ಅಸ್ತಿತ್ವದಲ್ಲಿರುವ ರೂ.500/- ಮತ್ತು ರೂ.1000/- ಮುಖಬೆಲೆಯ ನೋಟುಗಳನ್ನು ಪಡೆದುಕೊಂಡು ಹೊಸ ನೋಟುಗಳನ್ನು ನೀಡುವ ಅಧಿಕಾರವನ್ನು ಹೊಂದಿರುತ್ತವೆ. ಆದರೆ, ಭಾರತೀಯ ರಿಸರ್ವ್ ಬ್ಯಾಂಕ್ ಈ ಸುತ್ತೋಲೆಯನ್ನು ರಾಷ್ಟ್ರದ ಸಾರ್ವಜನಿಕ ರಂಗದ ಬ್ಯಾಂಕುಗಳಿಗೆ, ಖಾಸಗಿ ಬ್ಯಾಂಕುಗಳಿಗೆ, ವಿದೇಶ ಬ್ಯಾಂಕುಗಳಿಗೆ, ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಮತ್ತು ರಾಜ್ಯ ಸಹಕಾರಿ ಬ್ಯಾಂಕುಗಳಿಗೆ ಅನ್ವಯವಾಗುವಂತೆ ನೀಡಿರುತ್ತದೆ. ಆದರೆ, ಸುತ್ತೋಲೆಯ ಯಾವುದೇ ಭಾಗದಲ್ಲಿ ಪತ್ತಿನ ಚಟುವಟಿಕೆ ನಡೆಸುವ ಸಹಕಾರಿಗಳ ಕುರಿತು ಉಲ್ಲೇಖವಿರುವುದಿಲ್ಲ. ಇದರಿಂದಾಗಿ ಪತ್ತಿನ ಚಟುವಟಿಕೆ ನಡೆಸುತ್ತಿರುವ ಸಹಕಾರಿಗಳಲ್ಲಿ ಗೊಂದಲವುಂಟಾಗಿರುತ್ತದೆ. ಈ ಗೊಂದಲವನ್ನು ನಿವಾರಿಸುವ ದೃಷ್ಠಿಯಿಂದ ದಿನಾಂಕ 10 ನವಂಬರ್ 2016ರ ಅಪರಾಹ್ನ ಭಾರತೀಯ ರಿಸರ್ವ್ ಬ್ಯಾಂಕ್‌ನ ಚಲಾವಣೆ ವಿಭಾಗದ (Issue Department) ಸಹ ಪ್ರಧಾನ ವ್ಯವಸ್ಥಾಪಕರನ್ನು ಬೇಟಿಯಾಗಿ ಚರ್ಚಿಸಲಾಗಿದ್ದು, ಈ ಚರ್ಚೆಯ ಮುಖ್ಯಾಂಶಗಳು ಕೆಳಕಂಡಂತಿರುತ್ತದೆ.

- ❖ ಸಹಕಾರಿಗಳು ಸಹಕಾರಿಯ ಸದಸ್ಯರಿಂದ ರೂ.500/- ಮತ್ತು ರೂ.1000/- ಮುಖಬೆಲೆಯ ಸಾಲ ಮರು ಪಾವತಿಯ ಕಂತುಗಳನ್ನು ಪಡೆದುಕೊಳ್ಳಬಹುದಾಗಿರುತ್ತದೆ ಮತ್ತು ಸಹಕಾರಿಯಲ್ಲಿ ಈಗಾಗಲೇ ಇರುವ ಸದಸ್ಯರಿಂದ ಠೇವಣಿಯನ್ನು ದಿನಾಂಕ 30 ಡಿಸೆಂಬರ್ 2016ರ ವರೆಗೆ ಸ್ವೀಕರಿಸಬಹುದಾಗಿರುತ್ತದೆ.
- ❖ ಸಹಕಾರಿಯು ರೂ.500/- ಮತ್ತು ರೂ.1000/- ಮುಖಬೆಲೆಯ ನೋಟುಗಳ ಮೂಲಕ ಸಹಕಾರಿಯ ಸದಸ್ಯರಿಂದ ಪಡೆದುಕೊಂಡಿರುವ ಸಾಲ ಮರು ಪಾವತಿಯ ಕಂತುಗಳು ಮತ್ತು ಸದಸ್ಯರಿಂದ ಸ್ವೀಕರಿಸುವ ಠೇವಣಿಗಳಿಗೆ ಸಂಬಂಧಿಸಿದಂತೆ ಸಹಕಾರಿಯು ಸೂಕ್ತ ದಾಖಲೆಗಳನ್ನು ಹೊಂದಿರತಕ್ಕದ್ದು. ಠೇವಣಿಯನ್ನು ಸ್ವೀಕರಿಸುವುದಾದಲ್ಲಿ, ಠೇವಣಿ ನೀಡಿರುವ ಸದಸ್ಯನ ಪೋಟೋ, ವಿಳಾಸ ದೃಡೀಕರಣ, ಸದಸ್ಯನ ಗುರುತಿನ ದಾಖಲೆಯನ್ನು ಪಡೆದುಕೊಂಡು ಠೇವಣಿ ಸ್ವೀಕರಿಸಬಹುದಾಗಿರುತ್ತದೆ ಮತ್ತು ಸಹಕಾರಿಯು ಪಡೆದುಕೊಂಡಿರುವ ಮೊತ್ತವನ್ನು ಅದೇ ದಿನ ಅಥವಾ ಮರುದಿನವೇ ಸದರಿ ಮೊತ್ತವನ್ನು ಸಹಕಾರಿಯ ಬ್ಯಾಂಕ್ ಖಾತೆಯಲ್ಲಿ ಜಮಾ ಮಾಡಬೇಕಿರುತ್ತದೆ. ಹೆಚ್ಚು ದಿನಗಳ ಕಾಲ ಸಹಕಾರಿಯಲ್ಲಿ ಇಟ್ಟುಕೊಳ್ಳುವುದು ಸೂಕ್ತವಲ್ಲ.

  ಪರಂತು, ಯಾವುದೇ ಸಾರ್ವಜನಿಕರಿಂದ/ ಹೊಸದಾಗಿ ಸದಸ್ಯರನ್ನು ಸೇರಿಸಿಕೊಂಡು ದೊಡ್ಡ ಮೊತ್ತದ ನಿಶ್ಚಿತ ಠೇವಣಿಗಳನ್ನು ಸ್ವೀಕರಿಸುವಂತಿಲ್ಲ.
- ❖ ಸಹಕಾರಿಯು ತಾನು ಖಾತೆ/ವ್ಯವಹಾರವನ್ನು ಹೊಂದಿರುವ ಬ್ಯಾಂಕಿನೊಂದಿಗೆ ಮಾತುಕತೆ ನಡೆಸಿ, ಸದರಿಯವರು ರೂ.500/- ಮತ್ತು ರೂ.1000/- ಮುಖಬೆಲೆಯ ನೋಟುಗಳನ್ನು ಸಹಕಾರಿಯ ಖಾತೆಗೆ

ಜಮಾ ಮಾಡಲು ಸಮ್ಮತಿಸಿದಲ್ಲಿ ಮಾತ್ರ ಸಹಕಾರಿಯ ಸದಸ್ಯರಿಂದ ರೂ.500/- ಮತ್ತು ರೂ.1000/- ಮುಖಬೆಲೆಯ ನೋಟುಗಳನ್ನು ಸಾಲ ಮರು ಪಾವತಿಯ ಮತ್ತು ಠೇವಣಿಯ ಉದ್ದೇಶಕ್ಕಾಗಿ ಪಡೆಯಬಹುದಾಗಿರುತ್ತದೆ.

- ದಿನಾಂಕ 08 ನವಂಬರ್ 2016ರ ನಂತರ ಸಹಕಾರಿಯು ತನ್ನ ಬ್ಯಾಂಕ್ ಖಾತೆಗೆ ಜಮಾ ಮಾಡಿರುವ ರೂ.500/- ಮತ್ತು ರೂ.1000/- ಮುಖಬೆಲೆಯ ನೋಟುಗಳ ಕುರಿತು ಆದಾಯ ತೆರಿಗೆ ಇಲಾಖೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ಸಂಬಂಧಿಸಿದ ಬ್ಯಾಂಕ್ ಸಹಕಾರಿಯ ದಾಖಲೆಗಳನ್ನು ಪರಿಶೀಲಿಸಬಹುದಾಗಿರುತ್ತದೆ ಮತ್ತು ಸಹಕಾರಿಯ ಬ್ಯಾಂಕ್ ಖಾತೆಯಲ್ಲಿ ಜಮಾ ಮಾಡಿರುವ ರೂ.500/- ಮತ್ತು ರೂ.1000/- ಮುಖಬೆಲೆಯ ನೋಟುಗಳ ಕುರಿತಂತೆ ಅಸಮರ್ಪಕ ದಾಖಲೆಗಳಿದ್ದಲ್ಲಿ, ಸಹಕಾರಿಯು ತೊಂದರೆಗೆ ಸಿಲುಕುವ ಅಪಾಯವಿರುತ್ತದೆ.
- ದಿನಾಂಕ 08 ನವಂಬರ್ 2016 ರಿಂದ 30 ಡಿಸೆಂಬರ್ 2016ರ ಅವಧಿಯಲ್ಲಿ ಯಾವುದೇ ಸದಸ್ಯನ ಒಟ್ಟು ಠೇವಣಿ ಮೊತ್ತ/ ಜಮೆಯು ರೂ.2.5ಲಕ್ಷಗಳಿಗಿಂತ ಹೆಚ್ಚಿದಲ್ಲಿ ಆದಾಯ ಮೂಲಕ್ಕೆ ಅಗತ್ಯ ದಾಖಲಾತಿಗಳನ್ನು ನೀಡಬೇಕಾಗುತ್ತದೆ ಎಂದು ತಿಳಿಸಿದರು. ಈ ಮೇಲಿನ ಚರ್ಚೆಯ ನಂತರ ಸಂಯುಕ್ತ ಸಹಕಾರಿಯು ಈ ಕೆಳಗಿನಂತೆ ನಿಲುವನ್ನು ಪ್ರಕಟಿಸಿದೆ.

**ಸಂಯುಕ್ತ ಸಹಕಾರಿಯ ನಿಲುವು:**

- ಸಹಕಾರಿಯು ಕೆಲವೊಂದು ಪ್ರಾಯೋಗಿಕ ತೊಂದರೆ ಮತ್ತು ಅನಾವಶ್ಯಕವಾದ ಸಮಸ್ಯೆಗಳಿಗೆ ಸಿಲುಕುವುದನ್ನು ತಪ್ಪಿಸುವುದಕ್ಕಾಗಿ ತಾತ್ಕಾಲಿಕವಾಗಿ ಸಹಕಾರಿಯ ಪತ್ತಿನ ಕಾರ್ಯಚಟುವಟಿಕೆಯನ್ನು ಸ್ಥಗಿತಗೊಳಿಸುವುದು ಮತ್ತು ಹೊಸ ನೋಟುಗಳು ಪೂರ್ಣ ಪ್ರಮಾಣದಲ್ಲಿ ಲಭ್ಯವಾದ ಮೇಲೆ ವ್ಯವಹರಿಸುವುದು ಸೂಕ್ತ ಎಂಬುದು ಸಂಯುಕ್ತ ಸಹಕಾರಿಯ ನಿಲುವಾಗಿರುತ್ತದೆ.
- ಸಹಕಾರಿಗಳು ರೂ.500/- ಮತ್ತು ರೂ.1000/- ಮುಖಬೆಲೆಯ ನೋಟುಗಳನ್ನು ಪಡೆದುಕೊಳ್ಳಲು ಹೆಚ್ಚಿನ ಉತ್ಸಾಹವನ್ನು ತೋರಿಸದೆ, ಸಾಲಗಳನ್ನು ಸುಲಭವಾಗಿ ಮರುಪಾವತಿ ಆಗುತ್ತದೆ ಎಂದು ಭಾವಿಸಿ ಹಳೆಯ/ಚಲಾವಣೆಯಲ್ಲಿ ಇಲ್ಲದ ರೂ.500/- ಮತ್ತು ರೂ.1000/- ಮುಖಬೆಲೆಯ ನೋಟುಗಳನ್ನು ಪಡೆದುಕೊಳ್ಳುವುದು ಸೂಕ್ತವಲ್ಲ. ರೂ.500/- ಮತ್ತು ರೂ.1000/- ಮುಖಬೆಲೆಯ ನೋಟುಗಳನ್ನು ತೆಗೆದುಕೊಳ್ಳಲು ಮತ್ತು ಹೊಸ ರೂ.500/-, ರೂ.2000/- ನೋಟುಗಳನ್ನು ನೀಡಲು ಭಾರತೀಯ ರಿಸರ್ವ್ ಬ್ಯಾಂಕ್ ಈ ಸುತ್ತೋಲೆಯನ್ನು ರಾಷ್ಟ್ರದ ಸಾರ್ವಜನಿಕ ರಂಗದ ಬ್ಯಾಂಕುಗಳಿಗೆ, ಖಾಸಗಿ ಬ್ಯಾಂಕುಗಳಿಗೆ, ವಿದೇಶ ಬ್ಯಾಂಕುಗಳಿಗೆ, ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಮತ್ತು ರಾಜ್ಯ ಸಹಕಾರಿ ಬ್ಯಾಂಕುಗಳಿಗೆ ಮಾತ್ರ ನೀಡಲಾಗಿರುತ್ತದೆ. ಅಲ್ಲದೆ, ಸಹಕಾರ ಸಂಘಗಳಾದ ಜನತಾ ಬಜಾರ್, ಹಾಲು ಉತ್ಪಾದಕರ ಸಂಘ, ಹಾಫ್‌ಕಾಮ್ಸ್, ಇವುಗಳಲ್ಲಿ ಖರೀದಿಗೆ ಮಾತ್ರ ಅವಕಾಶ ನೀಡಿದೆ. ಈ ಹಿನ್ನೆಲೆಯಲ್ಲಿ ಈ ಕುರಿತು ಸಂಯುಕ್ತ ಸಹಕಾರಿಯ ಸ್ಪಷ್ಟವಾದ ನಿಲುವೇನೆಂದರೆ ಪತ್ತಿನ ಕಾರ್ಯಚಟುವಟಿಕೆಯ ನಡೆಸುವ ಸಹಕಾರ ಸಂಸ್ಥೆಗಳು ಹಳೆಯ ರೂ.500/- ಮತ್ತು ರೂ.1000/- ಮುಖಬೆಲೆಯ ನೋಟುಗಳನ್ನು ತೆಗೆದುಕೊಳ್ಳದಿರಲು ತಿಳಿಸಿದೆ ಮತ್ತು ಪಾರದರ್ಶಕವಾಗಿ ಮತ್ತು ಸಮರ್ಪಕವಾಗಿ ಕಾರ್ಯನಿರ್ವಹಿಸುವುದು ಸೂಕ್ತವಾಗಿದೆ.

ಈ ಮೇಲಿನ ಅಂಶಗಳು ಭಾರತೀಯ ರಿಸರ್ವ್ ಬ್ಯಾಂಕ್ ಪ್ರಸ್ತುತ ನೀಡಿರುವ ಸುತ್ತೋಲೆಯನ್ನು ಆಧರಿಸಿದೆ. ಸುತ್ತೋಲೆಯಲ್ಲಿ ಬದಲಾವಣೆಗಳಾದಲ್ಲಿ ಸಹಕಾರಿಗಳಿಗೆ ಮಾಹಿತಿ ನೀಡಲಾಗುವುದು.

ವಂದನೆಗಳೊಂದಿಗೆ,

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

Karnataka State Souharda Federal Cooperative Ltd.
Reg. No. RSR / SOU / ACT / 136 / Regn 051 / 2001-02 dated 04-01-2002
Bangalore